### ಕರ್ನಾಟಕ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ. ಪ್ರಕಾಶ ಕಮ್ಮರಡಿ ಹೇಳಿಕೆ

# ₹2,100ಗೆ ಜೋಳ, ₹2,300ಗೆ ರಾಗಿ ಖರೀದಿ

ಪ್ರಜಾವಾಣಿ ವಾರ್ತೆ

ಜನವಾಡ: 'ಅನ್ನಭಾಗ್ಯ ಯೋಜನೆಯಡಿ ವಿತರಿಸಲು ರಾಜ್ಯ ಸರ್ಕಾರ ಈ ಬಾರಿ ರೈತರಿಂದ ಪ್ರತಿ ಕ್ವಿಂಟಲ್‌ಗೆ ₹ 2,100ಗೆ ಜೋಳ ಮತ್ತು ₹ 2,300 ಗೆ ರಾಗಿ ಖರೀದಿಸಲಿದೆ' ಎಂದು ಕರ್ನಾಟಕ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ. ಟಿ.ಎನ್. ಪ್ರಕಾಶ ಕಮ್ಮರಡಿ ತಿಳಿಸಿದರು.

ಕರ್ನಾಟಕ ಕೃಷಿ ಬೆಲೆ ಆಯೋಗ ಹಾಗೂ ಕರ್ನಾಟಕ ಆಹಾರ ಆಯೋಗದ ಸಹಯೋಗದಲ್ಲಿ ಬೀದರ್ ತಾಲ್ಲೂಕಿನ ಕಮಠಾಣ ಬಳಿಯ ಕರ್ನಾಟಕ ಪಶು ವೈದ್ಯಕೀಯ ವಿಶ್ವವಿದ್ಯಾಲಯದಲ್ಲಿ ಸೋಮವಾರ ನಡೆದ ಜೋಳ ಮತ್ತು ತೊಗರಿ ಆಧಾರಿತ ಕೃಷಿ, ಖರೀದಿ ಮತ್ತು ವಿತರಣೆ ಸದೃಢಗೊಳಿಸುವ ಕುರಿತ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

'ಮಾಲ್ದಂಡಿ ಜೋಳ ಕೊಡಲು ಯಾರೂ ಸಿದ್ಧರಿಲ್ಲ. ಹೀಗಾಗಿ ಹೈಬ್ರಿಡ್ ಜೋಳ ದೊರೆತರೂ ಸರ್ಕಾರ ಕೊಂಡುಕೊಳ್ಳಲಿದೆ' ಎಂದು ಹೇಳಿದರು.

'ರಾಜ್ಯದಲ್ಲಿ ಸುಮಾರು 1 ಕೋಟಿ ಪಡಿತರ ಚೀಟಿದಾರರು ಇದ್ದಾರೆ. ತಿಂಗಳಿಗೆ 2.5 ಲಕ್ಷ ಟನ್ ಆಹಾರಧಾನ್ಯದ ಅವಶ್ಯಕತೆ ಇದೆ. ಅಕ್ಕಿ ಜತೆಗೆ ಜೋಳ, ರಾಗಿ, ತೊಗರಿಯನ್ನೂ ಪೂರೈಸಬೇಕಿದೆ' ಎಂದು ತಿಳಿಸಿದರು.

'ಸರ್ಕಾರ, ಅಗತ್ಯ ಇರುವಷ್ಟು ಪ್ರಮಾಣದಲ್ಲಿ ಆಹಾರಧಾನ್ಯ ಖರೀದಿಸಲು ಸಿದ್ಧವಿದೆ. ರೈತರು ಜೋಳ, ರಾಗಿ ಹಾಗೂ ತೊಗರಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಬೇಕು' ಹೇಳಿದರು.

'ರೈತರು, ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಪ್ರತಿ ಎಕರೆಗೆ 10 ರಿಂದ 15 ಕ್ವಿಂಟಲ್ ಜೋಳ ಹಾಗೂ 10 ರಿಂದ 14 ಕ್ವಿಂಟಲ್ ತೊಗರಿ ಇಳುವರಿ ಪಡೆಯಬಹುದು. ಅದನ್ನು ಸರ್ಕಾರಕ್ಕೆ ಮಾರಾಟ ಮಾಡಿ ಲಾಭ ಗಳಿಸಬಹುದು' ಎಂದು ತಿಳಿಸಿದರು.

'ಅಕ್ಕಿ, ಗೋಧಿ ಇಂದಿನ ಬೆಳೆಗಳಾಗಿದ್ದರೆ, ಸಿರಿಧಾನ್ಯಗಳು ಭವಿಷ್ಯದ ಬೆಳೆಗಳಾಗಿವೆ' ಎಂದು ಕಾರ್ಯಾಗಾರ ಉದ್ಘಾಟಿಸಿದ ಜಹೀರಾಬಾದ್‌ನ ಡೆಕ್ಕನ್ ಡೆವೆಲಪ್‌ಮೆಂಟ್ ಸೊಸೈಟಿಯ ಕಾರ್ಯದರ್ಶಿ ಪಿ.ವಿ. ಸತೀಶ ಅಭಿಪ್ರಾಯಪಟ್ಟರು.

'ಬರ ಹಾಗೂ ವಾತಾವರಣ ಬದಲಾವಣೆಗೆ ಹೊಂದಿಕೊಳ್ಳುವ ಶಕ್ತಿ ಸಿರಿಧಾನ್ಯಗಳಿಗೆ ಇದೆ' ಎಂದು ತಿಳಿಸಿದರು.

'ಪಡಿತರ ವ್ಯವಸ್ಥೆಯಡಿ ವಿತರಣೆಗೆ ಆಯಾ ಊರುಗಳಲ್ಲೇ ಆಹಾರಧಾನ್ಯ ಖರೀದಿಸಿದರೆ ರೈತರಿಗೆ ಅನುಕೂಲ ಆಗಲಿದೆ. ಸಾಗಣೆ ವೆಚ್ಚ ತಪ್ಪಲಿದೆ. ಗುಣಮಟ್ಟದ ಆಹಾರವೂ ದೊರಕಲಿದೆ' ಎಂದು ತಿಳಿಸಿದರು.

'ಸಿರಿಧಾನ್ಯಗಳಿಂದ ಅಪೌಷ್ಟಿಕತೆ ನಿವಾರಿಸಬಹುದಾಗಿದೆ. ಆದ್ದರಿಂದ ಸಿರಿಧಾನ್ಯಗಳನ್ನು ಬೆಳೆಯುವ ರೈತರಿಗೆ ಸರ್ಕಾರ ಎಕರೆಗೆ ₹ 10 ಸಾವಿರ ಪ್ರೋತ್ಸಾಹ ಧನ ನೀಡಬೇಕು ಎಂದು ಸಲಹೆ ಮಾಡಿದರು.

ಕರ್ನಾಟಕ ಕೃಷಿ ಬೆಲೆ ಆಯೋಗದ ಸದಸ್ಯರಾದ ವಿ.ಬಿ. ಪಾಟೀಲ, ಡಿ.ಜಿ. ಹಸ್ಲಿ, ಎಚ್.ವಿ. ಶಿವಶಂಕರ, ಮಹಮ್ಮದ್ ಅಲಿ, ಮಂಜುಳಾಬಾಯಿ, ಪಶು ವೈದ್ಯಕೀಯ ಮಹಾವಿದ್ಯಾಲಯದ ಡೀನ್ ಡಾ. ಶಿವಪ್ರಕಾಶ ಉಪಸ್ಥಿತರಿದ್ದರು.

ಕೃಷಿ ಇಲಾಖೆಯ ಉಪ ನಿರ್ದೇಶಕ ಸೋಮಶೇಖರ ಬಿರಾದಾರ ಸ್ವಾಗತಿಸಿದರು.

ಕೃಷಿ ವಿಜ್ಞಾನ ಕೇಂದ್ರದ ಡಾ. ಕೆ. ಭವಾನಿ ನಿರೂಪಿಸಿದರು.

**ಮುಖ್ಯಾಂಶಗಳು**

- ಕಾರ್ಯಾಗಾರದಲ್ಲಿ ಬೀದರ್, ಕಲಬುರ್ಗಿ ರೈತರು ಭಾಗಿ
- ಆಹಾರಧಾನ್ಯಗಳ ದೇಸಿ ತಳಿಗಳ ಸಂರಕ್ಷಣೆ ಮಾಡಿ
- ಆಹಾರ ಭದ್ರತೆ ಒದಗಿಸಲು ರೈತರ ಸಹಕಾರ ಅಗತ್ಯ

ವಾತಾವರಣ ಬದಲಾವಣೆಯಿಂದ ದೇಶದ ಶೇ 60ರಷ್ಟು ಜನ ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಅಪೌಷ್ಟಿಕತೆಯಲ್ಲಿ ದೇಶ ವಿಶ್ವದಲ್ಲಿ 127ನೇ ಸ್ಥಾನದಲ್ಲಿದೆ.

ಪಿ.ವಿ. ಸತೀಶ,
ಡೆಕ್ಕನ್ ಡೆವೆಲಪ್‌ಮೆಂಟ್ ಸೊಸೈಟಿ ಕಾರ್ಯದರ್ಶಿ




ಬೀದರ್ ತಾಲ್ಲೂಕಿನ ಕಮಠಾಣ ಬಳಿಯ ಕರ್ನಾಟಕ ಪಶು ವೈದ್ಯಕೀಯ ವಿಶ್ವವಿದ್ಯಾಲಯದಲ್ಲಿ ಸೋಮವಾರ ಏರ್ಪಡಿಸಿದ್ದ ಕಾರ್ಯಾಗಾರದಲ್ಲಿ ಝಹೀರಾಬಾದ್‌ನ ಡೆಕ್ಕನ್ ಡೆವೆಲಪ್‌ಮೆಂಟ್ ಸೊಸೈಟಿಯ ಕಾರ್ಯದರ್ಶಿ ಪಿ.ವಿ.ಸತೀಶ ಮಾತನಾಡಿದರು